


ಕೊಹ್ಲಿ... ಯಶಸ್ಸು ಎಲ್ಲಿ... ಎಲ್ಲಿ?

ಭಾರತದ ಆಟಗಾರರು ಅಲ್ಲಿನ ವಾತಾವರಣಕ್ಕೆ ಹೊಂದಿಕೊಳ್ಳುವ ಸಲುವಾಗಿ 15 ದಿನಗಳ ಮೊದಲೇ ಹೋಗಿ ಅಭ್ಯಾಸ ಪಂದ್ಯಗಳನ್ನು ಆಡುತ್ತಿದ್ದರು. ಈ ಬಾರಿ ಚೇತೇಶ್ವರ ಪೂಜಾರ ಕೌಂಟಿ ಆಡಲು ಬೇಗನೆ ಇಂಗ್ಲೆಂಡ್‌ಗೆ ಹೋಗಿದ್ದು ಬಿಟ್ಟರೆ ಉಳಿದವರು ಐಪಿಎಲ್‌ನ ಝಗಮಗಿಸುವ ಲೋಕದಲ್ಲಿ ಬಂಧಿಯಾದರು. ಆಸ್ಟ್ರೇಲಿಯಾದ ಪ್ರಮುಖ ಆಟಗಾರರು ಐಪಿಎಲ್‌ನಿಂದ ಅಂತರ ಕಾಯ್ದುಕೊಂಡು ಡಬ್ಲ್ಯುಟಿಸಿ ಟೂರ್ನಿಯ ಅಭ್ಯಾಸಕ್ಕೆ ಸಮಯ ನೀಡಿದರು. ಭಾರತ ತಂಡ ಹಾಗೂ ಬಿಸಿಸಿಐ ಐಸಿಸಿಯ ಪ್ರಮುಖ ಟೂರ್ನಿಯ ಫೈನಲ್ ಪಂದ್ಯವನ್ನು ಗಂಭೀರವಾಗಿ ಪರಿಗಣಿಸಿದಂತೆ ಕಾಣಿಸಲಿಲ್ಲ.

ಹೀಗಾಗಿ ಐಪಿಎಲ್ ಬಂದ ಬಳಿಕ ಕ್ರಿಕೆಟ್‌ನ ಮೂಲಸೌಂದರ್ಯವಿರುವ ಟೆಸ್ಟ್‌ನ ಜನಪ್ರಿಯತೆ ಕಡಿಮೆಯಾಗುತ್ತಿದೆ ಎನ್ನುವ ಮಾತುಗಳು ಹಲವು ವರ್ಷಗಳಿಂದ ಕೇಳಿ ಬರುತ್ತಿವೆ. ಆದ್ದರಿಂದ ಫ್ರಾಂಚೈಸ್ ಆಧಾರಿತವಾಗಿ ನಡೆಯುವ ಟಿ–20 ಟೂರ್ನಿಗಳಿಗಿಂತಲೂ ಹೆಚ್ಚು ಟೆಸ್ಟ್ ಪಂದ್ಯಗಳನ್ನು ನಡೆಸಬೇಕಾಗಿದೆ. ಡಬ್ಲ್ಯುಟಿಸಿಗೆ ಪ್ರತ್ಯೇಕವಾಗಿ ಪೂರ್ಣ ಟೆಸ್ಟ್ ಸರಣಿಗಳನ್ನೇ ನಡೆಸಿದರೆ ಕ್ರಿಕೆಟ್ ವ್ಯವಹಾರಿಕ ಎನ್ನುವ ಪಟ್ಟ ಕಳಚಿಕೊಂಡು ಕ್ರೀಡೆಯಾಗಿ ಉಳಿದುಕೊಳ್ಳಲು ಸಾಧ್ಯವಾಗುತ್ತದೆ.

## ಮಹತ್ವದ ಘಟ್ಟದಲ್ಲಿಯೇ ಸೋಲು

ಕೊನೆಯ ಸಲ ಐಸಿಸಿ ಟ್ರೋಫಿ ಗೆದ್ದ ಬಳಿಕ ಹಿಂದಿನ ಹತ್ತು ವರ್ಷಗಳ ಅವಧಿಯಲ್ಲಿ ಭಾರತ ಐಸಿಸಿ ಟೂರ್ನಿಗಳಾದ ಡಬ್ಲ್ಯುಟಿಸಿಯಲ್ಲಿ ಎರಡು ಬಾರಿ ಫೈನಲ್, ಚಾಂಪಿಯನ್ಸ್ ಟ್ರೋಫಿಯಲ್ಲಿ ಒಂದು ಸಲ ರನ್ನರ್ಸ್ ಅಪ್, ಏಕದಿನ ವಿಶ್ವಕಪ್‌ನಲ್ಲಿ ಎರಡು ಸಲ ಸೆಮಿಫೈನಲ್ ಮತ್ತು ಟಿ–20 ವಿಶ್ವಕಪ್‌ನಲ್ಲಿ ಎರಡು ಬಾರಿ ಸೆಮಿಫೈನಲ್ ತಲುಪಿದೆ. ಆದರೆ, ಪ್ರಶಸ್ತಿ ಗೆಲ್ಲುವ ಕನಸು ಕೈಗೂಡಿಲ್ಲ.

ಒಂದು ಸೋಲು ಮತ್ತೊಂದು ಗೆಲುವಿಗೆ ಮೆಟ್ಟಿಲು ಎನ್ನುವುದು ಸಹಜವಾದ ಮಾತು. ಒಂದು ದಶಕದ ಅವಧಿಯಲ್ಲಿ ಹಲವು ಬಾರಿ ಪ್ರಶಸ್ತಿ ಸಮೀಪ ಬಂದಿದ್ದು ಸಣ್ಣ ಸಾಧನೆಯಂತೂ ಖಂಡಿತ ಅಲ್ಲ. ಆದರೆ, ಚರಿತ್ರೆ ಸೃಷ್ಟಿಸುವ ಸಾಮರ್ಥ್ಯ ಇದ್ದರೂ ಅದನ್ನು ಕಳೆದುಕೊಂಡಿದ್ದನ್ನು ಒಪ್ಪುವಂತಿಲ್ಲ.

ವಿಶ್ವ ಕ್ರಿಕೆಟ್‌ನಲ್ಲಿ ಭಾರತಕ್ಕೆ ತನ್ನ ಶಕ್ತಿಯನ್ನು ತೋರಿಸಲು ಈಗ ತವರಿನಲ್ಲಿಯೇ ಉತ್ತಮ ವೇದಿಕೆ ಲಭಿಸಿದೆ. ಇದೇ ವರ್ಷದ ಅಕ್ಟೋಬರ್‌ನಲ್ಲಿ ಐಸಿಸಿ ಏಕದಿನ ವಿಶ್ವಕಪ್ ಟೂರ್ನಿಗೆ ಭಾರತ ಮೊದಲ ಬಾರಿಗೆ ಸ್ವತಂತ್ರವಾಗಿ ಆತಿಥ್ಯ ವಹಿಸಲಿದೆ. ಭಾರತದಲ್ಲಿ 1987, 1996 ಮತ್ತು 2011ರಲ್ಲಿ ಈ ಟೂರ್ನಿಗಳು ನಡೆದಾಗ ನೆರೆ ರಾಷ್ಟ್ರಗಳು ಕೂಡ ಆತಿಥ್ಯದ ಪಾಲುದಾರಿಕೆ ಹೊಂದಿದ್ದವು. ಇದೊಂದು ಸಲ ಮಾತ್ರ ವಿಶ್ವಕಪ್‌ನಲ್ಲಿ ಹತ್ತು ತಂಡಗಳು ಭಾಗವಹಿಸಲಿದ್ದು, 2027ರಲ್ಲಿ ತಂಡಗಳ ಸಂಖ್ಯೆ 14ಕ್ಕೆ ಏರಿಕೆಯಾಗಲಿದೆ. ಹೀಗಾಗಿ ಐಸಿಸಿ ಪ್ರಮುಖ ಟೂರ್ನಿಯಲ್ಲಿ ತವರಿನಲ್ಲಿ ಸಾಮರ್ಥ್ಯ ತೋರಿಸುವ ಸವಾಲು ಭಾರತದ ಮುಂದಿದೆ.

ಮುಂದಿನ ವರ್ಷ ವೆಸ್ಟ್ ಇಂಡೀಸ್ ಹಾಗೂ ಅಮೆರಿಕದ ಜಂಟಿ ಆತಿಥ್ಯದಲ್ಲಿ ಟಿ–20 ವಿಶ್ವಕಪ್ ನಡೆಯಲಿದ್ದು ಇದು ಕೂಡ ಐಸಿಸಿ ಮಾನ್ಯತೆ ಹೊಂದಿರುವ ಜಗತ್ತಿನ ಎಲ್ಲ ತಂಡಗಳಿಗೆ ಪ್ರತಿಷ್ಠೆಯ ಕಣವಾಗಿದೆ. ಇಂಥ ಕಣದಲ್ಲಿ ಚಾಂಪಿಯನ್ಸ್ ಆಗಿ ಈಗ ಮತ್ತೆ ಆರಂಭವಾಗಿರುವ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಮೂರನೇ ಆವೃತ್ತಿಯಲ್ಲಿ ಟ್ರೋಫಿ ಮುಡಿಗೇರಿಸಿಕೊಂಡರೆ ಭಾರತ ತಂಡದ ‘ಫೈನಲ್ ಫೋಬಿಯಾ’ ಬಗ್ಗೆ ಇರುವ ಚರ್ಚೆಗೆ ಪೂರ್ಣವಿರಾಮ ಬೀಳಲಿದೆ.

ಇಲ್ಲವಾದರೆ ಏಕದಿನ ವಿಶ್ವಕಪ್‌ನಲ್ಲಿ ಒಟ್ಟು ಎಂಟು ಬಾರಿ ಸ್ಪರ್ಧಿಸಿ ನಾಲ್ಕು ಬಾರಿ ಸೆಮಿಫೈನಲ್ ಹಾಗೂ ಎರಡು ಸಲ ಕ್ವಾರ್ಟರ್ ಫೈನಲ್‌ನಲ್ಲಿ ಸೋತು ‘ಚೋಕರ್ಸ್’ ಪಟ್ಟ ಕಟ್ಟಿಕೊಂಡಿರುವ ದಕ್ಷಿಣ ಆಫ್ರಿಕಾದ ಜೊತೆ ಭಾರತದ ಹೆಸರೂ ತಳುಕು ಹಾಕಿಕೊಳ್ಳುವ ಕಾಲ ದೂರವೇನಿಲ್ಲ.

ಪ್ರತಿಕ್ರಿಯಿಸಿ: feedback@sudha.co.in